

## ಗಟ್ಟಿ ಮನ ಸೋಲದು

ಈ ಚಿತ್ರವನ್ನು ನೋಡಿದಾಕ್ಷಣ 'ಗಟ್ಟಿಯಾದ ಮನಸ್ಸು ಸೋಲಲು ಸಾಧ್ಯವಿಲ್ಲ' ಎಂಬ ಸಿದ್ದೇಶ್ವರ ಸ್ವಾಮೀಜಿ ಮಾತು ನೆನಪಿಗೆ ಬಂತು. ಈಚೆಗೆ ಬೆಂಗಳೂರಿನ ನಂದನ ಬಡಾವಣೆಯ ನನ್ನ ಗೆಳತಿ ಮನೆಗೆ ಹೋಗುವಾಗ ಮಾರ್ಗ ಮಧ್ಯ ರೆಂಬೆ ಕೊಂಬೆಗಳನ್ನು ಕಡಿದು ಕಾಂಡವನ್ನಷ್ಟೇ ಉಳಿಸಿದ್ದ ಬೇವಿನಮರ ಗಮನಿಸಿದೆ. ನೋಡಲು ಅದು ಒಣಗಿದಂತೆ ಕಾಣುತ್ತಿತ್ತು. ಇನ್ನೇನು ಅದು ಸಾಯುವ ಹಂತದಲ್ಲಿತ್ತು ಎಂದು ನಾನು ಭಾವಿಸಿದ್ದೆ. ಆದರೆ ಜಿನುಗುವ ಮಳೆ ಹನಿಗಳ ಜೊತೆ ಜೊತೆಗೆ ಸೂರ್ಯನ ಕಿರಣಗಳು, ಕೊರಡಂತಿದ್ದ ಮರದ ಮೇಲೆ ಬಿದ್ದಿದ್ದರಿಂದ ನಾಲ್ಕೈದು ಕಡೆಯಲ್ಲಿ ಚಿಗುರೊಡೆದು ತನ್ನ ಜೀವಂತಿಕೆಯನ್ನು ಪ್ರದರ್ಶಿಸುತ್ತಿತ್ತು. ಅದನ್ನು ಕಂಡ ನನಗೆ ಮತ್ತೆ ನೆನಪಾಗಿದ್ದು ಬಸವಣ್ಣನವರ ವಚನ.

ನೀನೊಲಿದರೆ ಕೊರಡು ಕೊನರುವುದಯ್ಯ
ನೀನೊಲಿದರೆ ಬರಡು ಹಯನಹುದಯ್ಯ
ನೀನೊಲಿದರೆ ವಿಷವಮೃತವಹುದಯ್ಯ
ನೀನೊಲಿದರೆ ಸಕಲ ಪಡಿಪದಾರ್ಥ ಇದಿರಲಿಪ್ಪವು ಕೂಡಲಸಂಗಮದೇವ

ಏನೇ ಆಗಲಿ, ಮನೆಗೊಂದು ಮರವಿರಲಿ, ಬಡಾವಣೆಗೊಂದು ಉದ್ಯಾನವಿರಲಿ, ಅದುವೇ ನಮ್ಮ ಜೀವಂತ ಬದುಕಿಗೆ ಉಸಿರಾಗಿರಲಿ.

—ಪ್ರಿಯಾಂಕಾ, ಬೆಂಗಳೂರು





## ರಮಣೀಯ ನಾನೆಮಾಚಿ ಜಲಪಾತ

'ನಾನೆಮಾಚಿ ಜಲಪಾತ'ವು ಪಶ್ಚಿಮ ಘಟ್ಟಗಳ ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ ಸದ್ದಿಲ್ಲದೆ ಧುಮ್ಮಿಕ್ಕುವ ರುದ್ರ ರಮಣೀಯ ಜಲಪಾತ. ಇದಿರುವ ತಾಣ ಮಹಾರಾಷ್ಟ್ರದ ರಾಯಗಢ ಜಿಲ್ಲೆಯ ಮಹಾಡ್ ತಾಲ್ಲೂಕಿನ ಗುಗುಲ್ಪಿ. ಈ ಪುಟ್ಟ ಹಳ್ಳಿಯ ದಟ್ಟ ಅಡವಿಯ ನಟ್ಟ ನಡುವಿನ ಪ್ರಾಕೃತಿಕ ಆಕರ್ಷಣೆಯಾಗಿರುವ ಈ ಜಲಪಾತ 410 ಅಡಿಗಳಷ್ಟು ಎತ್ತರದಿಂದ ಧುಮ್ಮಿಕ್ಕುವ ಪರಿಯೇ ಬಲು ಸೋಜಿಗ. ಮೊದಲು ಮೇಲಿನಿಂದ ಮಂದಗಮನೆಯಾಗಿ ಹರಿದು ಬರುವ ಪ್ರಶಾಂತ ನೀರಿನ ನೀಲ ವರ್ಣವು ವಿಶೇಷ. ಮೇಲಿಂದ ಕೆಳಗಿನವರೆಗೆ ಏಕಧಾರೆಯಾಗಿ ಸಾಗುವ ಪರಿ ಅಪೂರ್ವ. ಮಾತ್ರವಲ್ಲದೆ ಜಲಪಾತದ ಕೆಳಗೆ ನಿರ್ಮಾಣಗೊಂಡಿರುವ ಕೆರೆಯ ರಚನೆಯೊಳಗಿನ ನೀರು ದಿನವಿಡೀ ವಿವಿಧ ವರ್ಣಗಳೊಂದಿಗೆ ಹೊಳೆಯುವ ಮಾಂತ್ರಿಕತೆ ಪ್ರವಾಸಿಗರನ್ನು ಮಂತ್ರಮುಗ್ಧಗೊಳಿಸುತ್ತದೆ. ಎರಡನೇ ಸ್ತರದಲ್ಲಿ ಧಾರೆಗಳು ಕವಲೊಡೆದು ಕೆಲವು ಝರಿಗಳಾಗಿ ಹರಿಯುತ್ತವೆ.

ಕಾನನದ ಹಚ್ಚ ಹಸುರಿನ ಮಧ್ಯೆ, ಜಡಿ ಮಳೆಗೆ ಉಲ್ಬಣಗೊಂಡು ಭೋರ್ಗರೆಯುತ್ತಾ ಧುಮುಕುವ ಜಲಪಾತದ ಭವ್ಯತೆಯನ್ನು ಆಸ್ವಾದಿಸಲು ಜೂನ್–ಸೆಪ್ಟೆಂಬರ್ ಸೂಕ್ತ ಕಾಲ. ಇದು ಮುಂಬೈಯಿಂದ 240 ಕಿ.ಮೀ. ಹಾಗೂ ಪುಣೆಯಿಂದ 175 ಕಿ.ಮೀ. ದೂರದಲ್ಲಿದ್ದು, ಚಾರಣಿಗರಿಗಂತೂ ಅಚ್ಚುಮೆಚ್ಚಿನ ತಾಣವಾಗಿದೆ. ಎರಡೂ ಕಡೆಗಳಿಂದಲೂ ಮಹಾಡ್ ನಗರಕ್ಕೆ ಸಾರ್ವಜನಿಕ ಸಾರಿಗೆ ಸಂಪರ್ಕವಿದ್ದು ಮಹಾಡ್‌ನಿಂದ ಟ್ಯಾಕ್ಸಿ ಅಥವಾ ಆಟೊರಿಕ್ಷಾದ ಮೂಲಕ 25 ಕಿ.ಮೀ. ಕ್ರಮಿಸಿ ಜಲಪಾತವಿರುವ ಅರಣ್ಯದ ಮೂಲಗ್ರಾಮ ತಲುಪಬಹುದು. ಅಲ್ಲಿಂದ ಸುಮಾರು 3 ಕಿ.ಮೀ.ಗಳ ಚಾರಣ ಅನಿವಾರ್ಯ. ಜಾರುವ ಅರಣ್ಯ ಮಾರ್ಗದಲ್ಲಿ ಜಾಗ್ರತೆಯಿಂದ ಸಾವಕಾಶವಾಗಿ ಸಾಗಿ ಗಮ್ಯ ತಲುಪಿದರೆ, ನಾನೆಮಾಚಿಯ ಸ್ವರ್ಗ ಸದೃಶ ಚೆಲುವನ್ನು ಅನುಭವಿಸಿ ಸಾರ್ಥಕತೆ ಕಾಣಬಹುದು.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ